# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 102/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಮಹದೇವಸ್ವಾಮಿ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಬಸವರಾಜು | 10.06.2025 | |
| ವಯಸ್ಸು | ಃ 34 ವರ್ಷ | | |
| ವೃತ್ತಿ | ಃ ಗ್ರಾಮ ಪಂಚಾಯಿತಿಯಲ್ಲಿ ಡಾಟಾ ಎಂಟ್ರಿ ಆಪರೇಟರ್ | ಪ್ರಾ.ಸಾ. | ಃ 04 |
| ವಾಸಸ್ಥಳ | ಃ ಬಿಳಿಗೆರೆ ಗ್ರಾಮ | ಚಾ.ಸಾ. | ಃ 10 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನಗೆ ಚಾ.ಸಾ–1 ಮತ್ತು ಮೃತ ಬಸವರಾಜು ಗೊತ್ತು. ಬಸವರಾಜು ಈಗ ಜೀವಂತ ಇರುವುದಿಲ್ಲ. ಬಸವರಾಜು 2020 ನೇ ಇಸವಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಬಿಳಿಗೆರೆ ಗ್ರಾಮದಲ್ಲಿರುವ ಹುಣಸೆ ಮರಕ್ಕೆ ಹಗ್ಗ ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದರು. ನನಗೆ ವಿಷಯ ಗೊತ್ತಾಗಿ ನಾನು ಆ ಸ್ಥಳಕ್ಕೆ ಹೋಗಿದ್ದೆ. ಆರೋಪಿತರ ಮತ್ತು ಮೃತ ಬಸವರಾಜು ರವರ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು ಆದರೆ ಯಾವ ವಿಚಾರಕ್ಕೆ ಗಲಾಟೆ ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಚಾ.ಸಾ–1 ಮತ್ತು ಆಕೆಯ ಗಂಡ ಬಿಳಿಗೆರೆ ಗ್ರಾಮದಲ್ಲಿಯೇ ವಾಸವಾಗಿದ್ದರು. ಅವರಿಬ್ಬರು ಆಗಾಗ್ಗೆ ಚಾ.ಸಾ–1 ರವರ ತಾಯಿ ಮನೆಗೆ ಹೋಗಿ ಬರುತ್ತಿದ್ದರು. ನಾನು ಸ್ಥಳಕ್ಕೆ ಹೋದ ಮೇಲೆ ಮೃತ ಬಸವರಾಜು ಯಾವ ಕಾರಣಕ್ಕಾಗಿ ಹುಣಸೆ ಮರಕ್ಕೆ ಹಗ್ಗದಿಂದ ನೇಣು ಹಾಕಿಕೊಂಡಿದ್ದ ಎನ್ನುವ ಬಗ್ಗೆ ಗೊತ್ತಾಗಲಿಲ್ಲ. ಪೊಲೀಸರು ಸ್ಥಳಕ್ಕೆ ಬಂದಿದ್ದರು ಮತ್ತು ಜನರು

ಇದ್ದರು. ಬಸವರಾಜು ರವರ ಹೆಣವನ್ನು ಹಗ್ಗದಿಂದ ಕೆಳಗೆ ಬಿಚ್ಚಿದ್ದರು. *3-4* ಜನ ಸೇರಿ ಆ ಹೆಣವನ್ನು ಬಿಚ್ಚಿದ್ದರು. ಚಾ.ಸಾ-*1* ರವರು ಈ ಬಗ್ಗೆ ದೂರನ್ನು ಕೊಟ್ಟಿದ್ದರು. ಹೆಣವನ್ನು ಇಳಿಸಿದ ಮೇಲೆ ಪೊಲೀಸ್ ಇನ್ಸ್‌ಪೆಕ್ಟರ್ ರವರು ಹೆಣವನ್ನು ಶೋಧನೆ ಮಾಡಿದ್ದರು. ಹೆಣವನ್ನು ಶೋಧನೆ ಮಾಡುವಾಗ ಮೃತನ ಪ್ಯಾಂಟಿನ ಜೇಬಿನಿಂದ ಮತ್ತು ಶರ್ಟ್ ಜೇಬಿನಿಂದ ಪತ್ರಗಳು ಸಿಕ್ಕಿದ್ದವು. ನಾನು ದೂರದಲ್ಲಿ ನಿಂತುಕೊಂಡಿದ್ದೆ. ಕೇವಲ ಪತ್ರಗಳನ್ನು ದೂರದಿಂದ ನೋಡಿದ್ದೆ. ಆಗ ನನಗೆ ಆ ಪತ್ರದಲ್ಲಿ ಏನು ಬರೆದಿತ್ತು ಎಂದು ಗೊತ್ತಾಗಿರಲಿಲ್ಲ.

*2.* *2-3* ದಿನ ಬಿಟ್ಟು ಪೋಲೀಸ್ ಠಾಣೆಗೆ ನನ್ನನ್ನು ಕರೆದಿದ್ದರು ಸಿಕ್ಕಂತ ಸಾಕ್ಷ್ಯವನ್ನು ಸೀಲ್ ಮಾಡುವ ವಿಚಾರದಲ್ಲಿ ಕರೆಸಿದ್ದರು. ಮೃತ ಬಸವರಾಜು ರವರು ಡೆತ್ ನೋಟ್ ಬರೆದಿದ್ದರು ಚಾ.ಸಾ-*1* ರವರು ಮನೆಯಿಂದ ಇನ್ನೊಂದು ಪತ್ರವನ್ನು ತಂದು ಕೊಟ್ಟಿದ್ದರು. ಡೆತ್ ನೋಟ್ ಮತ್ತು ಚಾ.ಸಾ-*1* ರವರು ತಂದು ಕೊಟ್ಟಂತ ಪತ್ರ ಮೃತನು ಬರೆದಂತ ಪತ್ರ ಅಂತ ಹೇಳಿದ್ದರು. ಚಾ.ಸಾ-*1* ರವರು ತಂದು ಕೊಟ್ಟಂತ ಪತ್ರವನ್ನು ಮೃತ ಬಸವರಾಜು ಜೀವಂತ ಇದ್ದಾಗ ಬರೆದಂತ ಪತ್ರ ಎಂದು ಗೊತ್ತಾಗಿತ್ತು. ಮೃತನು ಹುಣಸೆ ಮರಕ್ಕೆ ನೇಣು ಹಾಕಿಕೊಂಡ ದಿನದಿಂದ *3* ದಿನಕ್ಕೆ ಚಾ.ಸಾ-*1* ರವರು ಮೃತನು ಜೀವಂತ ಇದ್ದಾಗ ಬರೆದಂತ ಪತ್ರವನ್ನು ಪೋಲೀಸ್ ಠಾಣೆಗೆ ತಂದು ಕೊಟ್ಟಿದ್ದರು. ಚಾ.ಸಾ-*1* ರವರು *16.11.2020* ರಂದು ಆ ಪತ್ರವನ್ನು ಪೊಲೀಸರಿಗೆ ತಂದು ಕೊಟ್ಟಿದ್ದರು. ಪೊಲೀಸರು ಡೆತ್ ನೋಟ್ ಮತ್ತು ಚಾ.ಸಾ-*1* ರವರು ತಂದು ಕೊಟ್ಟಂತ ಪತ್ರವನ್ನು ಸೀಲ್ ಮಾಡಿದ್ದರು. ನಾನು ಈಗ ನಾನು ನೋಡುತ್ತಿರುವ ಸಹಿಯನ್ನು ದಿಃ*16.11.2020* ರಂದು ಪೋಲೀಸ್ ಠಾಣೆಯಲ್ಲಿ ಮಾಡಿದ್ದೆ. ಸಾಕ್ಷಿದಾರರು ನೋಡಿ ಗುರುತಿಸಿದ ಸಹಿವುಳ್ಳ ದಾಖಲೆ ಅಮಾನತ್ತು ಮಹಜರ್ ಇದ್ದು ಅದನ್ನು ನಿಪಿ-*5* ಎಂದು

ಮತ್ತು ಸಾಕ್ಷಿದಾರರ ಸಹಿಯನ್ನು ನಿ.ಪಿ–*5(ಎ)* ಎಂದು ಗುರುತಿಸಲಾಯಿತು. ದಿಃ*16.11.2020* ರಂದು ಚಾ.ಸಾ–*1* ರವರು ತಂದು ಹಾಜರುಪಡಿಸಿದ್ದ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದಂತ ದಾಖಲೆಯನ್ನು ನಿಪಿ–*6* ಎಂದು ಗುರುತಿಸಲಾಯಿತು. ನಾನು ಈಗ ನಾನು ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದಂತ ಸಹಿವುಳ್ಳ ದಾಖಲೆ ಈಗಾಗಲೇ ನಿ.ಪಿ–*6* ಎಂದು ಗುರುತಿಸಿಲ್ಪಟ್ಟಿದ್ದು. ಸಾಕ್ಷಿದಾರರ ಸಹಿಯನ್ನು ನಿ.ಪಿ–*6(ಎ)* ಎಂದು ಗುರುತಿಸಲಾಯಿತು. ನಾನು ಹುಣಸೆ ಮರದ ಹತ್ತಿರ ಹೋದಾಗ ಪೊಲೀಸರು ನನ್ನನ್ನು ವಿಚಾರಣೆ ಮಾಡಿರಲಿಲ್ಲ. ದಿಃ*16.11.2020* ರಂದು ಪೊಲೀಸರು ನನ್ನ ಹೇಳಿಕೆಯನ್ನು ಪೋಲೀಸ್ ಠಾಣೆಯಲ್ಲಿ ತೆಗೆದುಕೊಂಡಿದ್ದರು. ಬಸವರಾಜು ಜಮೀನಿನ ವಿಚಾರದಲ್ಲಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಗೊತ್ತಾಗಿತ್ತು. ಆದರೆ ಆತನ ಸಾವಿಗೆ ಯಾರು ಕಾರಣ ಎನ್ನುವ ಬಗ್ಗೆ ನನಗೆ ಗೊತ್ತಾಗಲಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*3.* ನಾನು ಪೊಲೀಸರ ಮುಂದೆ ಮೃತ ಬಸವರಾಜು ಮನೆ ಕಟ್ಟಲು ಪ್ರಾರಂಭ ಮಾಡಿದ್ದು ಸಿದ್ದರಾಜು ಮತ್ತು ಮನೆಯವರು ಬಸವರಾಜುವಿಗೆ ತೊಂದರೆ ಕೊಡುತ್ತಾ ಇದ್ದರು. ಈ ವಿಚಾರ ನನಗೆ ಗೊತ್ತಿತ್ತು. ಅದೇ ಕಾರಣದಿಂದ ಮೃತ ಬಸವರಾಜು ಮತ್ತು ಆತನ ಹೆಂಡತಿ ಕಲ್ಲಹಳ್ಳಿಗೆ ಹೋಗಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ಮೃತ ಬಸವರಾಜು ಆಗಾಗ್ಗೆ

ಕಲ್ಲಹಳ್ಳಿಯಿಂದ ತನ್ನ ಗ್ರಾಮಕ್ಕೆ ಬಂದು ಮನೆ ಕೆಲಸವನ್ನು ನೋಡಿಕೊಂಡು ಹೋಗುತ್ತಿದ್ದ ಎಂದರೆ ಸರಿ. ತನಿಖೆ ಸಮಯದಲ್ಲಿ ಬಸವರಾಜುವಿನ ಪ್ಯಾಂಟ್ ಜೇಬಿನಲ್ಲಿ ಡೆತ್ ನೋಟ್ ಬರೆದಿಟ್ಟಿದ್ದು ಅದರಲ್ಲಿ ಬಸವರಾಜುವಿನ ಸಾವಿಗೆ ಸಿದ್ದರಾಜು, ಸುಧಾ, ಪ್ರವೀಣ್, ಅಭಿಷೇಕ್, ವಿಜಯಲಕ್ಷ್ಮಿ, ಚಂದ್ರಮ್ಮ, ಮಾದಯ್ಯ ಮತ್ತು ಮಹದೇವಸ್ವಾಮಿ ಕಾರಣ ಇರುತ್ತಾರೆ ಎಂದು ಬರೆದಿತ್ತು ಎಂದರೆ ಸರಿ. ನಾನು ಈ ವಿಚಾರವನ್ನು ಪೊಲೀಸರಿಗೆ ಹೇಳಿದ್ದೆ ಎಂದರೆ ಸರಿ. ದಿಃ*16.11.2020* ರಂದು ಚಾ.ಸಾ*–1* ರವರು ತಂದು ಹಾಜರುಪಡಿಸಿದ್ದ ನಿ.ಪಿ*–6* ಅನ್ನು ಮಾತ್ರ ಪೊಲೀಸರು ನಿ.ಪಿ*–5* ರಂತೆ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್. ರ ವರಿಂದಃ-</u> ಆರೋಪಿತರು ಪಾಟೀ ಸವಾಲು ಮಾಡಲು ಕಾಲಾವಕಾಶವನ್ನು ಕೋರಿದ್ದು ಕಾಲಾವಕಾಶವನ್ನುನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು